ಮನಸ್ಸುಮಾಡಿದ್ದರೆ ಈ ಹೊಗೆಯನ್ನೂ ಪೊಟ್ಟಣದಂತೆ ಕಟ್ಟಿ, ಹೊಗೆಯ ಉರಿಮಾತುಗಳಿಂದಲೇ ಅದನ್ನು ಬಿಗಿದು ಸುತ್ತಿ ಭಾಮಿನಿಯೆಂಬ ಬಣ್ಣದ ಕಾಗದದಿಂದ ಗಿಫ್ಟ್ ರ್‍ಯಾಪ್ ಮಾಡಿ ಕನ್ನಡಿಗರ ಮುಂದಿಟ್ಟು ಕೃಷ್ಣಾರ್ಪಣ ಎಂದುಬಿಡುತ್ತಿದ್ದ. ಸಿಡಿಲನ್ನೇ ಪೊಟ್ಟಣಗಟ್ಟಿದವನಿಗೆ ಇದೊಂದು ಅಸಾಧ್ಯದ ಮಾತೇ? ಎಂದು ಕೃಷ್ಣನೂ ಸಂತೋಷಪಡುತ್ತಿದ್ದ.

ಧೂಮ್ ಮಚಾಲೆ ಧೂಮ್ ಮಚಾಲೆ ಧೂಮ್... ಪೂಜೆಯಿಂದ ಫ್ಯೂನರಲ್‌ವರೆಗೆ ಎಲ್ಲೆಲ್ಲು ನೀನೇ ಎಲ್ಲೆಲ್ಲು ನೀನೇ ಎಲ್ಲೆಲ್ಲು ನೀನೇನೇ... ನಮ್ಮ ಪುರಾಣ ಪುಣ್ಯಕಥೆಗಳ ತುಂಬೆಲ್ಲ ಇದರದೇ ಕಾರುಬಾರು. ಹಿಂದೆ ಕಾಡಿನಲ್ಲಿ ಧೂಮ ಕಾಣಿಸಿಕೊಂಡರೆ ಅದು ಋಷ್ಯಾಶ್ರಮ ಎಂದೂ, ಅಲ್ಲಿ ಹೋಮಾಗ್ನಿಯನ್ನು ನಂದದಂತೆ ಕಾಪಾಡಿಕೊಂಡು ಮೂರು ಹೊತ್ತು ಹೊಗೆ ಎಬ್ಬಿಸಿ ಅಗ್ನಿಕಾರ್ಯ ಮಾಡುವವರೆಂದೂ ಅರ್ಥವಾಗುತ್ತಿತ್ತು. ಮುನಿಗಳು ಮಾಡುವ ಯಜ್ಞಕ್ಕೆ ರಾಕ್ಷಸರು ಮಾಂಸದ ತುಂಡುಗಳನ್ನು ಹಾಕಿ ಮಾಂಸದ ಹೊಗೆ ಏಳಲು ಸುರುವಾಯಿತೆಂದರೆ ಶಿಷ್ಟ ರಕ್ಷಕರಿಗೆ ಅಲ್ಲಿ ಡ್ಯೂಟಿ ಬಿತ್ತು ಎಂದೇ ಅರ್ಥ.

'ಹೊಗೆಯ ತಿಂಬುವುದೊಂದು ಸುಗುಣವೆಂದೆನಬೇಡ...' ಎನ್ನುತ್ತಾ ಧೂಮ ಪಾನೀಯ ಮಾತ್ರವಲ್ಲ ಖಾನೀಯವೂ ಎಂದು ಸರ್ವಜ್ಞ ತೋರಿಸಿದ್ದಾನೆ. ಹಿಂದೆಲ್ಲ ಇಂದ್ರಜಾಲದ ಶೋಗಳಲ್ಲಿ ಫಯರ್ ಈಟರ್ ಎಂಬ ಒಂದು ಸೆಗ್ಮೆಂಟ್ ಇರುತ್ತಿತ್ತು. ಒಬ್ಬ ಅಗ್ನಿ ಕುಂಡದಿಂದ ಹರಿಯುವ ಹೊಗೆಯನ್ನು ತಿಂದು ನೀರು ಕುಡಿದು ಮತ್ತೆ ಕೆಲವು ಕ್ಷಣಗಳ ನಂತರ ತಿಂದ ಹೊಗೆಯನ್ನು ಬಾಯಿಯಿಂದ ಬಿಡುತ್ತಿದ್ದ. ರೈತರು ತಮ್ಮ ಹೊಲಗಳಲ್ಲಿ ಗೋಧಿಯ ತ್ಯಾಜ್ಯ ಸುಟ್ಟು ಇಡೀ ದೆಹಲಿಯೆಂಬ ಇಂದ್ರಪ್ರಸ್ಥವನ್ನು ಧೂಮ್ರಪ್ರಸ್ಥವನ್ನಾಗಿ ಮಾಡಿ, ವಾಹನ ಸಂಚಾರಕ್ಕೆ ಸಮ ಬೆಸ ದಿನಗಳ ನಿಗದಿ ಮಾಡಿಕೊಂಡು ಪರದಾಡಿದ್ದು ಎಲ್ಲರ ನೆನಪಿನಲ್ಲಿರುವ ವಿಷಯ. ಅಲ್ಲಿಗೆ ಈ ಫಯರ್ ಈಟರನ್ನು ಕರೆಸಿ, (ಕಿಂದರಿ ಜೋಗಿಯನ್ನು ಕರೆಸಿದಂತೆ) 'ಇದನ್ನು ತಿಂದು ಹಿಮಾಲಯದ ಕಡೆ ಹೋಗಿ ಉಗುಳಿ ಬಾರಪ್ಪಾ' ಎಂದು ಪ್ರೀತಿಯಿಂದ ಬೆನ್ನು ತಟ್ಟಿ ಕಳಿಸಿದ್ದರೆ, ನಮ್ಮ ಪವರ್ ಕೇಂದ್ರದ ಪುವರ್ ಸ್ಮಾಗನ್ನು ಸುಲಭದಲ್ಲಿ ನಿವಾರಿಸಿಕೊಳ್ಳಬಹುದಿತ್ತು. ಈ ವಹಿವಾಟಿನಲ್ಲಿ ಮಾತು ತಪ್ಪಿದರೆ ತಿಂದ ಹೊಗೆಯನ್ನು ಪುನಃ ಸಂಸತ್ ಭವನದ ಎದುರು ತಂದು ಉಗುಳುವ ಅಪಾಯವಂತೂ ಇದ್ದೇ ಇತ್ತು.

ಹೋಮ ಧೂಮದಿಂದ ಯಶ ಕಪ್ಪಾದಂತೆ ಸಿಗರೇಟಿನ ಹೊಗೆಯಿಂದ ತುಟಿ ಕಪ್ಪಾದವರನ್ನೂ, ಹೊಗೆಸೊಪ್ಪಿನಿಂದ ಹಲ್ಲು ಕಪ್ಪಾದವರನ್ನೂ, ನಂದಿ ಬಟ್ಟಲದ ಹೊಗೆಯಿಂದ ಹೆಣ್ಣುಗಳ ಕಣ್ಣಿನ ಅಂಚು ಕಪ್ಪಾದುದನ್ನೂ ನೋಡಿದ್ದೇನೆ. ಮೊದಲೆಲ್ಲ ಅಡಿಗೆಕೋಣೆಯ ಒಲೆಯ ಸರಿ ಮೇಲ್ಭಾಗದಲ್ಲಿ ಹೊಗೆಜಂಗ ಇರುತ್ತಿತ್ತು. ದೂರ ದೂರ ರೀಪು ಬಡಿದು ಮಾಡಿದ ಈ ಹೊಗೆ ಜಂಗಗಳಲ್ಲಿ ಎಷ್ಟೋ ವರ್ಷದ ಉಪ್ಪಿನಕಾಯಿ ಹಪ್ಪಳಗಳೆಲ್ಲ ಹೊಗೆ ಹಿಡಿಸಿಕೊಂಡು ಕುಳಿತಿರುತ್ತಿದ್ದವು. ಯಶಸ್ಸನ್ನು ಮಸಿಯಾಗಿಸಿಕೊಂಡ ಹಿರಿಯರ ವಿಷಯವನ್ನು ಹೇಳಲು ಪಂಪನಿಗೆ ಫ್ಯಾಮಿಲಿ ಲೆಗಸಿ ಎಂಬುದೊಂದು ಇತ್ತು. ನಮಗೇನಿದೆ? ಹೊಗೆಯಿಂದ ಮಸಿ ಹಿಡಿಸಿಕೊಂಡು ಸದಾ ಬಿಸಿಯಾಗಿರುವ ಹಳೆಯ ಅಡಿಗೆಮನೆಗಳೇ ನಮ್ಮ ವಂಶದ ಘನ ಲೆಗಸಿಯನ್ನು ಹೇಳಬೇಕು. ಅಡಿಗೆಮನೆಯ ಹಾಗೆ ಬಾಣಂತಿ ಕೋಣೆಗಳು ಧೂಪದ ಹೊಗೆಯ ಪರಿಮಳ ಬೀರಲು ಪ್ರಾರಂಭಿಸಿದುವೆಂದರೆ ಮನೆಗೆ ಹೊಸ ಅತಿಥಿಯ ಆಗಮನವಾಗಿದೆಯೆಂದೂ, ಮೂಲೆಯಲ್ಲಿ ಅಡಗಿದ್ದ ಸಕ್ಕಿಂಗ್ ಸೊಳ್ಳೆಗಳೆಲ್ಲ ತಮ್ಮ ಸೊಕ್ಕು, ಕೊಕ್ಕುಗಳೊಂದಿಗೆ ಪರಾರಿಯಾಗಿದ್ದಾವೆಂದೂ ಅರ್ಥ.

ಹೌಸ್ ವಾರ್ಮಿಂಗ್ ಸಮಾರಂಭದಲ್ಲಿ ಹೋಮದ ಹೊಗೆಯಿಂದ ಹೌಸ್ ವಾರ್ಮ್ ಆಗುವುದನ್ನು ಕಣ್ಣೀರು ಸುರಿಸುತ್ತಾ ನೋಡಿಯೇ ಇರುತ್ತೇವೆ. ಈಗ ಅಭಿವೃದ್ಧಿಯೆಂಬ ಯಜ್ಞದ ಹೊಗೆಯಿಂದ ಇಡೀ ಭೂಮಿಯೆಂಬ ಹೋಮ್ ವಾರ್ಮ್ ಆಗುವುದನ್ನು ನೋಡುತ್ತಾ ಇದ್ದೇವೆ. ಈ